# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 3372/2022

**ಚಾಸಾ :- 0 5 / ಪ್ರಾಸಾ :- 05**

| | |
|---|---|
| ಹೆಸರು | ಶಾಮಣ್ಣ |
| ತಂದೆ ಹೆಸರು | ಸಣ್ಣೇಗೌಡ |
| ವಯಸ್ಸು | 69 |
| ಉದ್ಯೋಗ | ನಿವೃತ್ತ ಸರ್ಕಾರಿ ನೌಕರ |
| ವಿಳಾಸ | ಅಂಜನಾನಗರ,ಬೆಂಗಳೂರು |

**ದಿನಾಂಕಃ 01.08.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಚಾಸಾ-1 ರಿಂದ 4, 6 ರಿಂದ 8 ರವರು ಪರಿಚಯ ಇರುತ್ತಾರೆ. ಆರೋಪಿಗಳು ಪರಿಚಯ ಇರುತ್ತಾರೆ. ಹುಡುಗನ ಮನೆಗೆ ಮದುವೆ ವಿಚಾರವಾಗಿ ಮಾತುಕತೆಗೆ ನಾನು ಹೋಗಿದ್ದೆನು, ಆ ಸಮಯದಲ್ಲಿ ನಾನು , ಕಿಟ್ಟಿ , ಅಶೋಕ್ ಕುಮಾರ್ ಮತ್ತು ನರಸೇಗೌಡರವರು ಇದ್ದೆವು. ಸದರಿ ಮಾತುಕತೆ ಮಂಡ್ಯದಲ್ಲಿ ಆಗಿರುತ್ತದೆ. ಮಾತುಕತೆಯ ಸಮಯದಲ್ಲಿ 150 ಗ್ರಾಂ ಬಂಗಾರ ಕೇಳಿದ್ದರು ಹಾಗೂ ಮದುವೆಯನ್ನು ಚುಂಚನಗಿರಿಯಲ್ಲಿ ಮಾಡಿಕೊಡಲು ಮಾತುಕತೆ ಯಾಗಿತ್ತು ಆ ಸಮಯದಲ್ಲಿ ಕೋರೋನಾ ಬಂತು ಎಂದ ನುಡಿಯುತ್ತಾರೆ. ಚಾಸಾ-1 ಮತ್ತು 1 ನೇ ಆರೋಪಿಯ ಮದುವೆಯು ಯಾವ ದಿನಾಂಕ ನಡೆದಿರುತ್ತದೆಂದು ನೆನಪು ಇರುವುದಿಲ್ಲ. ಮದುವೆಯ ನಂತರ ಚಾಸಾ- 1 ಮತ್ತು 1 ನೇ ಆರೋಪಿಯು ಮಾಗಡಿಯಲ್ಲಿ ವಾಸ ಇದ್ದರು. ಸದರಿ ಮಾಗಡಿಯಲ್ಲಿ

ಒಂದುವರೆ - ಎರಡು ತಿಂಗಳ ಕಾಲ ಚೆನ್ನಾಗಿ ಇದ್ದರು ನಂತರ ದುಡ್ಡು ಕಾಸು ವಿಚಾರವಾಗಿ ಗಲಾಟೆ ನಡೆದಿರುತ್ತದೆ. 1 ನೇ ಆರೋಪಿಯು ಚಾಸಾ-1 ರವರಿಗೆ ಖರ್ಚಿಗೆ ದುಡ್ಡನ್ನು ಕೊಡುತ್ತಿದ್ದಿರಲಿಲ್ಲ. ಚಾಸಾ-1 ರವರು ಅವರ ತಂದೆಯವರ ಮನೆಗೆ ಹೋದಾಗ ಚಾಸಾ--1 ರವರ ಬಳಿ ರೂ.5 ರೂಪಾಯಿ ಕೂಡಾ ಇರುತ್ತಿದ್ದಿರಲಿಲ್ಲ. ಆಗ ಚಾಸಾ-2 ಮತ್ತು 3 ರವರು ನಿನ್ನ ಹತ್ತಿರ 500 ರೂ. ಇರುವುದಿಲ್ಲವಾ ಏನು ಮಾಡುತ್ತಿದ್ದೀಯಾ ಎಂದು ಕೇಳಿದಾಗ ಗಲಾಟೆ ಶುರುವಾಗಿರುತ್ತದೆ.

ಚಾಸಾ-1 ರವರು ಮಂಡ್ಯಕ್ಕೆ ಹೋದಾಗಲೂ 2 ಮತ್ತು 3 ನೇ ಆರೋಪಿಗಳು ಚಾಸಾ- 1 ರವರಿಗೆ ನಿನಗೆ ಏಕೆ ಹಣ ಬೇಕು 1 ನೇ ಆರೋಪಿಯು ಹೇಗೆ ಹೇಳುತ್ತಾನೋ ಹಾಗೆ ಕೇಳು ಎಂದು ಹೇಳಿದ್ದರು. ಮಂಡ್ಯದಲ್ಲೂ ಚಾಸಾ-1 ರವರು ಊಟ ಮಾಡುತ್ತಿದ್ದಿರಲಿಲ್ಲ ಅಲ್ಲಿಯೂ ಸಹ ಚಿತ್ರಹಿಂಸೆ ಕೊಡುತ್ತಿದ್ದರು. ಬೆಳಗುಂಭದಲ್ಲಿ ಚಾಸಾ-1 ರವರ ತಮ್ಮನ ಗೋರಿಯನ್ನು ಕಟ್ಟಿಸುತ್ತಿದ್ದು ಆಗ 7.00 ಗಂಟೆ ಸಮಯ ಆದ ಕಾರಣ ಬೆಂಗಳೂರಿಗೆ ಹೋಗಲು ಆಗುವುದಿಲ್ಲವೆಂದು ಮಾಗಡಿಗೆ ಬಂದಾಗ ನಿಜಾಂಶ ಗೊತ್ತಾಗಿರುತ್ತದೆ. ಅಲ್ಲಿವಿಷಯಗೊತ್ತಾದಾಗ ಚಾಸಾ- 2 ಮತ್ತು 3 ರವರು ಚಾಸಾ-1 ರವರನ್ನು ಯಲಿಯೂರಿಗೆ ಕರೆದುಕೊಂಡು ಹೋಗಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-1 ರವರಿಗೆ 1 ನೇ ಆರೋಪಿಯು ನಿಮ್ಮ ತಂದೆ ಹೇಗೂ ಮದುವೆ ಸಮಯದಲ್ಲಿ ವರದಕ್ಷಿಣೆಯಾಗಿ ಏನನ್ನೂ ನೀಡಿರುವುದಿಲ್ಲ ಹಾಗಾಗಿ ಇನ್ನೋವಾ ಕಾರನ್ನು ಕೊಡಿಸಲು ಹೇಳು ಹಾಗೂ ನಿಮ್ಮ ಮನೆಯಲ್ಲಿ ಗಂಡು ಮಕ್ಕಳು ಇರುವುದಿಲ್ಲ ನಿನ್ನ ಪಾಲಿನ ಜಮೀನನ್ನು ಭಾಗ ಕೇಳಿ ಪಡೆದುಕೊ ನಾನು ಅದರಲ್ಲಿ ಆರ್ಗ್ಯಾನಿಕ್ ಫಾರಂ ಅನ್ನು ತೆರೆಯುತ್ತೇನೆ ಎಂದು ಹೇಳಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮದುವೆಯ ಸಮಯದಲ್ಲಿ ಹುಡುಗಿಗೆ ಒಡವೆ ಹಾಗೂ ಹುಡುಗನಿಗೆ ಒಂದುಬ್ರೇಸ್ ಲೇಟ್ , ಕೊರಳ ಚೈನ್, ಉಂಗುರ, ಬೆಳ್ಳಿ ಚೊಂಬು ಹಾಗೂ ತಟ್ಟೆಯನ್ನು ಕೊಟ್ಟು ದಿನಾಂಕ 04.04.2020 ರಂದು ಮದುವೆ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವರದಕ್ಷಿಣೆ ತರುವಂತೆ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಚಾಸಾ-2 ರವರಿಗೂ ಸಹ ಅವಾಚ್ಯ ಶಬ್ದಗಳಿಂದ ಬೈಯ್ದು ಮನೆಯಿಂದ ಆಚೆ ಹಾಕಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು ಃ- ಶ್ರೀ. ಎಲ್ ಜಿ ಜಿ** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಚಾಸಾ-3 ರವರು ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿ ನನ್ನ ಅಕ್ಕನ ಮಗಳು ಎಂದು ನುಡಿಯುತ್ತಾರೆ. ಮಾತುಕತೆ ಸಮಯದಲ್ಲಿ ಎಷ್ಟು ಜನ ಇದ್ದರು ಎಂದರೆ ಸಾಕ್ಷಿ ಅವರ ಕಡೆ ಸೇರಿ 15 ಜನ ಇದ್ದೆವು ಎಂದು ನುಡಿಯುತ್ತಾರೆ. ಕುಣಿಗಲ್ ನಲ್ಲಿ ನಿಶ್ಚಿತಾರ್ಥ ಆದ ಎಷ್ಟು ದಿನಗಳ ಮುಂಚೆ ಮಾತುಕತೆ ಆಗಿರುತ್ತದೆ ಎಂದರೆ ಸಾಕ್ಷಿ 1 ತಿಂಗಳು ಮುಂಚೆ ಎಂದು ನುಡಿಯುತ್ತಾರೆ. ಮಾತುಕತೆತೆಗೆ ಹೇಗೆ ಹೊಗಿರುತ್ತೀರಿ ಎಂದರೆ ಸಾಕ್ಷಿ ಕಾರಿನಲ್ಲಿ ಎಂದು ನುಡಿಯುತ್ತಾರೆ. ಎಷ್ಟು ಗಂಟೆಗೆ ಬೆಂಗಳೂರಿನಿಂದ ಹೊರಟಿರುತ್ತೀರಿ ಎಂದರೆ ಸಾಕ್ಷಿ ಬೆಳಿಗ್ಗೆ 9.00 ಗಂಟೆಗೆ ಎಂದು ನುಡಿಯುತ್ತಾರೆ. ಪೋಲಿಸರ ಅನುಮತಿ

ಪಡೆದು ಹೋಗಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳನ್ನು ಪೋಲಿಸರಿಗೆ ಹೇಳಿರುತ್ತೀರಾ ಎಂದರೆ ಸಾಕ್ಷಿ ಪೋಲಿಸರು ನನ್ನನ್ನು ಕರೆದಿರುವುದಿಲ್ಲವೆಂದು ನುಡಿಯುತ್ತಾರೆ.ಹಾಗಾಗಿ ನೀವು ಪೋಲಿಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲವಾ ಎಂದರೆ ಸಾಕ್ಷಿ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಆರೋಪಿಗಳು ಹೇಳಿರುವಂತೆ ಆರೋಪಿಗಳು ಯಾವುದೇ ತಪ್ಪನ್ನು ಮಾಡಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ-2 ರವರ ಮಾತನ್ನು ಕೇಳಿ ಸುಳ್ಳು ಸಾಸಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**

# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3372/2022

**ಚಾಸಾ ಃ- 04 / ಪ್ರಾಸಾ ಃ- 04**

| | |
|---|---|
| ಹೆಸರು | ಕೃಷ್ಣೇಗೌಡ |
| ತಂದೆ ಹೆಸರು | ಹೊನ್ನೇಗೌಡ |
| ವಯಸ್ಸು | 57 |
| ಉದ್ಯೋಗ | ವ್ಯವಸಾಯ |
| ವಿಳಾಸ | ಯಲಿಯೂರು , ಕುಣಿಗಲ್ ತಾಲ್ಲೂಕು |

**ದಿನಾಂಕಃ 01.08.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-1 ರಿಂದ 3, 5 ರಿಂದ 8 ರವರು ಪರಿಚಯ ಇರುತ್ತಾರೆ. ಆರೋಪಿಗಳು ಪರಿಚಯ ಇರುತ್ತಾರೆ. ಚಾಸಾ-1 ರವರ ಮದುವೆ ವಿಚಾರ ಸಂಬಂಧ ನರಸಿಂಹಮೂರ್ತಿ, ಶಾಮಣ್ಣ ,ಜನಾರ್ಧನ್ ಎಲ್ಲರೂ ಸೇರಿ ಒಟ್ಟಿಗೆ ಯಲಿಯೂರಿನಲ್ಲಿ ಮಾತುಕತೆ ಮಾಡಿದ್ದೆವು. ಆ ಸಮಯದಲ್ಲಿ ಚಾಸಾ-1 ರವರ ತಮ್ಮ ಮರಣ ಹೊಂದಿದರು. ನಂತರ ಕೋರೋನಾ ಬಂದಿದ್ದರಿಂದ ಮದುವೆಯನ್ನು ಸರಳವಾಗಿ ಮಾಡಿಕೊಡಿ ಎಂದು ಹೇಳಿದ್ದರು. ಅದರಂತೆ ಚುಂಚನಗಿರಿಯಲ್ಲಿ ಮದುವೆಯನ್ನು ಮಾಡಿಕೊಟ್ಟಿರುತ್ತಾರೆ. ನನಗೆ ದಿನಾಂಕ ಗೊತ್ತಿರುವುದಿಲ್ಲ. ನಂತರ ಗಂಡ ಹೆಂಡತಿ ಕಿತಾಪತಿ ಮಾಡಿಕೊಂಡು ವಿಚ್ಛೇಧನಕ್ಕೆ ಅರ್ಜಿಹಾಕಿದ್ದರು. ಅವರ ವೈಯಕ್ತಿಕ ವಿಚಾರಕ್ಕೆ ಜಗಳವಾಡುತ್ತಿದ್ದರು, ನನಗೆ ಗೊತ್ತಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಔಖಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಸ್ವಲ್ಪ ದಿನಗಳ ನಂತರ ಚಾಸಾ-1 ರವರ ತಾಯಿ ನಿಮಗೆ ಫೋನ್ ಮಾಡಿ ಚಾಸಾ-1 ರವರನ್ನು ನಾವು ಒಳ್ಳೆ ಮನೆಗೆ ಕೊಟ್ಟು ಮದುವೆಯನ್ನು ಮಾಡಲಿಲ್ಲವೆಂದು ಹೇಳಿ ಬೇಜಾರು ಮಾಡಿಕೊಂಡಿದ್ದು ಆಗ ನೀವು ಏನಾಯಿತು ಎಂದು ಕೇಳಿದ್ದಕ್ಕೆ ಚಾಸಾ- 1 ರವರ ತಾಯಿ ನನ್ನ ಮಗಳು ದುಡಿದರೂ ಸಹ ಅವಳಿಗೆ ಯಾವುದೇ ನೆಮ್ಮದಿ, ಸ್ವಾತಂತ್ರ್ಯವಿಲ್ಲ, ಅವಳು ದುಡಿಯುವ ಸಂಬಳವನ್ನು ಅವರೇ ಪಡೆದುಕೊಳ್ಳುತ್ತಾರೆ ಎಂದು ತಿಳಿಸಿದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-1 ರವರಿಗೆ 1 ನೇ ಆರೋಪಿಯು ನಿಮ್ಮ ತಂದೆ ಹೇಗೂ ಮದುವೆ ಸಮಯದಲ್ಲಿ ವರದಕ್ಷಿಣೆಯಾಗಿ ಏನನ್ನೂ ನೀಡಿರುವುದಿಲ್ಲ ಹಾಗಾಗಿ ಇನ್ನೋವಾ ಕಾರನ್ನು ಕೊಡಿಸಲು ಹೇಳು ಹಾಗೂ ನಿಮ್ಮ ಮನೆಯಲ್ಲಿ ಗಂಡು ಮಕ್ಕಳು ಇರುವುದಿಲ್ಲ ನಿನ್ನ ಪಾಲಿನ ಜಮೀನನ್ನು ಭಾಗ ಕೇಳಿ ಪಡೆದುಕೊ ನಾನು ಅದರಲ್ಲಿ ಆರ್ಗಾನಿಕ್ ಫಾರಂ ಅನ್ನು ತೆರೆಯುತ್ತೇನೆ ಎಂದು ಹೇಳಿದ್ದರು ಎಂದು ತಿಳಿಸಿದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ವಿಚಾರವಾಗಿ ಬಾಯಿಗೆ ಬಂದಂತೆ ಬೈಯ್ಯುತ್ತಾರೆ ಎಂದು ನಿಮಗೆ ವಿಷಯವನ್ನು ತಿಳಿಸಿದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆಗ ಚಾಸಾ-1 ರವರ ಅತ್ತೆ ಮತ್ತು ಮಾವರವರಿಗೆ ತಿಳಿಸಿದರೂ ಸದರಿಯವರು 1 ನೇ ಆರೋಪಿಯು ಹೇಗೆ ಹೇಳುತ್ತಾನೋ ಹಾಗೆ ಕೇಳು ಎಂದು ಹೇಳಿದ್ದರು ಎಂದು ತಿಳಿಸಿದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾವು ಹೇಳಿದಹಾಗೆ ಕೇಳದೆ ಇದ್ದರೆ 1 ನೇ ಆರೋಪಿಗೆ ಬೇರೆ ಮದುವೆ ಮಾಡುತ್ತೇವೆ ಎಂದು ಹೇಳಿ ಮಾನಸಿಕ ಮತ್ತು ದೈಹಿಕ ಹಿಂಸೆ ನಿಡೀದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಂತರ ನೀವು ಚಾಸಾ-1 ರವರಿಗೆ

ಫೋನ್ ಮಾಡಿ ಸದರಿ ಜಮೀನು ಹಾಗೂ ಕಾರನ್ನು ಕೇಳಿದ ಬಗ್ಗೆ ವಿಚಾರಿಸಿದಾಗ ಚಾಸಾ-1 ರವರೂ ಸಹ ನಿಮಗೆ ಸದರಿ ವಿಷಯವನ್ನು ಹೇಳಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 26.06.2021 ರ ಂದು ಕುಲದೀಪ್ ನ ಸ್ಮಾರಕವನ್ನು ನಿರ್ಮಿಸುತ್ತಿದ್ದ ಕೆಲಸವನ್ನು ಮುಗಿಸುವ ಸಲುವಗಿ ಬೆಳಗುಂಬಕ್ಕೆ ಹೋಗಿದ್ದು ಜೊತೆಗೆ 1 ನೇ ಆರೋಪಿಯನ್ನು ಕೇಳಿ ಚಾಸಾ-1 ರವರನ್ನೂ ಸಹ ಕರೆದುಕೊಂಡು ಹೋಗಿದ್ದೆವು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ದಿನ ಕೆಲಸ ಮುಗಿದಿದ್ದು ತಡವಾದ ಕಾರಣ ನಾವುಗಳು ಎಲ್ಲರೂ ಚಾಸಾ-1 ರವರ ಮನೆ ಮಾಗಡಿಗೆ ಹೋಗಿದ್ದು ಆಗ ನಾವು ಎಷ್ಟು ಭಾರಿ ಹೇಳಿದರೂ ಸಹ ಕೇಳದಂತೆ 1 ನೇ ಆರೋಪಿಯು ಚಾಸಾ-1 ರವರಿಗೆ ತಡವಾಗಿ ಬಂದಿದ್ದಕ್ಕೆ ಬಾಯಿಗೆ ಬಂದಂತೆ ಬೈಯ್ದು ನಿಮ್ಮ ತಂದೆ ವರದಕ್ಷಿಣೆಯಾಗಿ ಏನು ಕೊಟ್ಟಿದ್ದಾರ ಿಎಂದು ಚಾಸಾ- 1 ರವರಿಗೆ ಹೊಡೆದಿದ್ದಕ್ಕೆ ಏಕೆ ಈ ರೀತಿ ಮಾಡುತ್ತೀಯಾ ಎಂದು ಕೇಳಲು ಹೋದ ಚಾಸಾ-2 ರವರಿಗೂ ಸಹ ಏಕವಚನನಿದಿಂದ ಬಾಯಿಗೆ ಬಂದಂತೆ ಬೈಯ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಹಾಗೂ ನೀನು ಏನು ವರದಕ್ಷಿಣೆ ಕೊಟ್ಟಿರುತ್ತೀಯಾನ ಮ್ಮ ಮನೆಯಿಂದ ಆಚೆಗೆ ಹೋಗು ಎಂದು ಚಾಸಾ- 2 ರವರನ್ನು ಮನೆಯಿಂದ ಆಚೆಗೆ ತಳ್ಳಿ ಗಲಾಟೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಚಾಸಾ-1 ರವರನ್ನು ಮನೆಯಿಂದ ಆಚೆಗೆ ಕಳುಹಿಸಿದ ವಿಚಾರವನ್ನು ತಿಳಿಸಿ ಈಗ ಚಾಸಾ-1 ರವರು ನಮ್ಮ ಮನೆಯಲ್ಲೇ ಇದ್ದಾರೆ ಎಂದು ಚಾಸಾ- 3 ರವರು ನಿಮಗೆ ತಿಳಿಸಿದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-1 ರವರು ನಮ್ಮ ಮನೆಯಲ್ಲೇ ಇದ್ದಾರೆ ವಾಪಸ್ಸು ಬಂದು ಕರೆದುಕೊಂಡು ಹೋಗಿರುವುದಿಲ್ಲ ಆ ಸಂಬಂಧ ದೂರನ್ನು ಕೊಟ್ಟಿರುತ್ತೇವೆ ಎಂದು ಚಾಸಾ- 3 ರವರು ನಿಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು ಃ- ಶ್ರೀ. ಎಲ್ ಜಿ ಜಿ** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ನ್ಯಾಯಾಲಯಕ್ಕೆ ನಿಮ್ಮನ್ನು ಯಾರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿ ಪೋಲಿಸರು ಫೋನ್ ಮಾಡಿ 1 ನೇ ತಾರೀಕು ಕೇಸು ಇರುತ್ತದೆ ಎಂದು ಹೇಳಿದ್ದರು ಆಗ ನಾನು ಬರುತ್ತೇನೆ ಎಂದು ಹೇಳಿದ್ದೆನು ಎಂದು ನುಡಿಯುತ್ತಾರೆ. ಪೋಲಿಸರು ನಿಮ್ಮ ಮನೆಗೆ ಬಂದು ಸಮನ್ಸ್ ಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈಗ ನಿಮ್ಮ ಜೊತೆ ಚಾಸಾ- 2 ರವರೂ ಬಂದಿದ್ದಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಹೇಳಿಕೆಯನ್ನು ನೀಡುವಂತೆ ಪೋಲಿಸರು ನಿಮಗೇನಾದರೂ ನೋಟೀಸ್ ಕೊಟ್ಟಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಾದನಾಯಕನಹಳ್ಳಿಯಲ್ಲಿ ದೂರನ್ನು ಕೊಟ್ಟ ಬಗ್ಗೆ ನಿಮಗೆ ಚಾಸಾ-1 ರವರು ಹೇಳಿರುತ್ತಾರೋ ಅಥವಾ ಚಾಸಾ-2 ರವರು ಹೇಳಿರುತ್ತಾರೋ ಎಂದರೆ ಸಾಕ್ಷಿ ಮಾದನಾಯಕನಹಳ್ಳಿಯಲ್ಲಿ ದೂರು ಕೊಟ್ಟ ಬಗ್ಗೆ ನನಗೆ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಯಾವ ಪೋಲಿಸ್ ಠಾಣೆಯವರಿಗೆ ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಮಾಗಡಿ ಪೋಲಿಸ್ ಠಾಣೆಯಲ್ಲಿ ಎಂದು ನುಡಿಯುತ್ತಾರೆ. ಹೇಳಿಕೆಯನ್ನು ಯಾರು ಬರೆಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಾನು ಮತ್ತು ಚಾಸಾ-2 ರವರು ಹೇಳಿದ್ದನ್ನು ಪೊಲಿಸರು ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಮಾತುಕತೆ ನಿಮ್ಮ ಮನೆಯಲ್ಲೇ ಆಗಿತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಎಲ್ಲರೂ ಸರಳವಾಗಿ ಚುಂಚನಗಿರಿಯಲ್ಲಿ ಮದುವೆ ಮಾಡಿಕೊಡಲು ಒಪ್ಪಿದ್ದಿರಿ ಎಂದರೆ ಸಾಕ್ಷಿ ನಾವು ಹಾಗೂ ಅವರು ಎಲ್ಲರೂ ಒಪ್ಪಿದ್ದೆವು ಎಂದು ನುಡಿಯುತ್ತಾರೆ. ರೂ. 20 ಸಾವಿರ ಚತ್ರಕ್ಕೆ ಹಣ ಕಟ್ಟುವುದನ್ನು ಬಿಟ್ಟರೆ ಬೇರೆ ಮದುವೆ ಖರ್ಚು ಇದ್ದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುುತ್ತಾರೆ. ಚಾಸಾ-1 ಮತ್ತು 1 ನೇ ಆರೋಪಿಯು ವಿವಾಹ ಆದ ನಂತರ ಎಲ್ಲಿ ಇದ್ದರು ಎಂದರೆ ಸಾಕ್ಷಿ ನನ್ನ ಮಾವನವರ ಮನೆಯಲ್ಲಿ ಎಂದು

ನುಡಿಯುತ್ತಾರೆ. ನೀವೇನಾದರೂ ಹೋಗಿದ್ದಿರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಾಗಡಿಯಲ್ಲಿ ಮನೆ ಮಾಡಿದಾಗ ನೀವು ಹೋಗಿದ್ದಿರ ಎಂದರೆ ಸಾಕ್ಷಿ ಹೋಗಿದ್ದೆನು ಎಂದು ನುಡಿಯುತ್ತಾರೆ. ಎಷ್ಟು ಭಾರಿಹೋಗಿದ್ದಿರಿ ಎಂದರೆ ಸಾಕ್ಷಿ ಒಂದೇ ಭಾರಿ ಎಂದು ನುಡಿಯುತ್ತಾರೆ. ಆಗ ಚಾಸಾ-1 ರವರು ಏನಾದರೂ 1 ನೇ ಆರೋಪಿಯು ಚಿತ್ರಹಿಂಸೆ ನೀಡುತ್ತಾರೆ ಎಂದು ಹೇಳಿದ್ದರ ಎಂದರೆ ಸಾಕ್ಷಿ ಚಿತ್ರಹಿಂಸೆ ಬಗ್ಗೆ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಪೋಲಿಸರಿಗೆ ಕೊಟ್ಟಿರುವ ಹೇಳಿಕೆಯನ್ನು ಚಾಸಾ-2 ರವರು ಪೋಲಿಸರಿಗೆ ನಿಮ್ಮ ಮುಖಾಂತರ ಹೇಳಿಕೊಟ್ಟಿರುವುದು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

1 ನೇ ಆರೋಪಿಯ ತಂದೆ ಮತ್ತು ತಾಯಿಯವರನ್ನು ಕರೆದು ನ್ಯಾಯ ಪಂಚಾಯ್ತಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಯಾರು ಯಾರು ಎಂದರೆ ಸಾಕ್ಷಿ ನಾನು, ಅಶೋಕ್, ನರಸಿಂಹಮೂರ್ತಿ , ಜನಾರ್ಧನ್ ಮತ್ತು 1 ನೇ ಆರೋಪಿಯ ತಂದೆ ತಾಯಿ ಎಂದು ನುಡಿಯುತ್ತಾರೆ. ಚಾಸಾ-1 ಮತ್ತು 1 ನೇ ಆರೋಪಿ ಇದ್ದಿರಲಿಲ್ಲವಾ ಎಂದರೆ ಸಾಕ್ಷಿ ಕರೆಸಿದ್ದರು ಎಂದು ನುಡಿಯುತ್ತಾರೆ. ಚಾಸಾ-1 ಮತ್ತು 1 ನೇ ಆರೋಪಿಯ ನಡುವೆ ಕಿತ್ತಾಟ ಆದ ಮೇಲೆ ನಾನು ನ್ಯಾಯ ಪಂಚಾಯ್ತಿ ಮಾಡಿಸಿರುತ್ತೇನೆ ಎಂದು ಪೋಲಿಸರಿಗೆ ಹೇಳಿಕೆ ಕೊಡಲು ಏನು ತೊಂದರೆ ಇದ್ದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾವ ನ್ಯಾಯ ಪಂಚಾಯ್ತಿಯೂ ಆಗಿರುವುದಿಲ್ಲ ಆ ಕಾರಣ ನೀವು ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಚಾಸಾ-1 ರವರು ಈಗ ಏನು ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಡಾಕ್ಟರ್ ಕೆಲಸ ಎಂದು ನುಡಿಯುತ್ತಾರೆ. ನೀವೂ ಚಾಸಾ-1 ರವರ 2 ನೇ ಮದುವೆಗೆ ಹೋಗಿದ್ದಿರ ಎಂದರೆ ಸಾಕ್ಷಿ ಹೋಗಿದ್ದೆನು ಎಂದು ನುಡಿಯುತ್ತಾರೆ.

ಚಾಸ-2 ರವರು  ವಿಚ್ಛೇಧನ ಆದ ಬಗ್ಗೆ  ಹೇಳಿರುತ್ತಾರಾ ಎಂದರೆ ಸಾಕ್ಷಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಯಾರು ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ 1 ನೇ ಆರೋಪಿಯು ಚಾಸಾ-1 ರವರ ಮೇಲೆ ಎಂದು ನುಡಿಯುತ್ತಾರೆ. ಸದರಿ ವಿಚ್ಛೇಧನ ಪಡೆಯುವ ಮುಂಚೆ ನ್ಯಾಯಪಂಚಾಯ್ತಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ- 1 ಮತ್ತು 1 ನೇ ಆರೋಪಿಯ ನಡುವೆ ಸಂಬಂಧದ ಬಗ್ಗೆ ಹಾಗೂ ಈ ಪ್ರಕರಣದ ಬಗ್ಗೆ ನಿಮಗೆ ಏನೂ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ-2 ರವರಿಗೋಸ್ಕರ ನೀವು ಪೋಲಿಸರಿಗೆ ಸುಳ್ಳು ಹೇಳಿಕೆಯನ್ನು ಕೊಟ್ಟು ನ್ಯಾಯಾಲಯದಲ್ಲಿ ಸುಳ್ಳು ಸಾಸಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಚಾಸಾ-1 ರಿಂದ 3 ರವರಿಗೆ ವರದಕ್ಷಿಣೆಯಾಗಿ ಯಾವುದೇ ಜಮೀನು ಮತ್ತು ಕಾರನ್ನು ಕೇಳಿರುವುದಿಲ್ಲ ನೀವು ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.**